**ಸಾಕ್ಷಿಯನ್ನು ದಿಃ 20.09.2022 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಪಿ.ಆರ್ ವಕೀಲರಿಂದಃ**

ಪ್ರತಿವಾದಿಯು ಈ ಪ್ರಕರಣದಲ್ಲಿ ಏನೆಂದು ತಕರಾರು ಸಲ್ಲಿಸಿರುತ್ತಾರೆ ಮತ್ತು ಯಾವಾವ ದಾಖಲಾತಿಗಳನ್ನು ನೀಡಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ನಿಪಿ-1 ರ ಮೂಲ ಪ್ರತಿ ಮಳೆ ಬಂದು ಒದ್ದೆಯಾಗಿ ನಾಶವಾಗಿರುತ್ತದೆ. ನಾನು ಮೂಲ ಪ್ರತಿಯನ್ನು ಪ್ರತಿವಾದಿಗೆ ಹಸ್ತಾಂತರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಸ್ವತ್ತನ್ನು ಬಾಡಿಗೆಗೆ ಕೊಟ್ಟಿರುವ ಬಗ್ಗೆ ದಾಖಲಾತಿಗಳು ಇರುವುದಿಲ್ಲ. ಬಾಡಿಗೆ ಸ್ವೀಕರಿಸಿದ ಬಗ್ಗೆ ಯಾವುದೇ ರಸೀದಿಗಳು ಇರುವುದಿಲ್ಲ. ಪ್ರತಿವಾದಿಯ ತಾಯಿಪೆದ್ದ ಪಾಪಮ್ಮರವರು ನನಗೆ ಗೊತ್ತಿರುತ್ತಾರೆ. ಸದರಿ ಪೆದ್ದಪಾಪಮ್ಮರವರು ನನ್ನ ಗಂಡನ ಸ್ನೇಹಿತರಾಗಿರುತ್ತಾರೆ.

ಪೆದ್ದಪಾಪಮ್ಮ ಮತ್ತು ನಮ್ಮ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ. ಸಾಕ್ಷಿಗೆ ದಿನಾಂಕ 14.09.2001 ರ ಶುದ್ಧಕ್ರಯಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಿ ಅದರಲ್ಲಿರುವ ವೇಳ್ಳಿ ಎಂಬ ಸಹಿ ಯಾರದ್ದು ಎಂದು ಕೇಳಿದಾಗ ಸದರಿ ದಾಖಲಾತಿಯ 2 ನೇ ಪುಟದಲ್ಲಿರುವ ಸಹಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಕ್ರಯಪತ್ರವು ಜೆರಾಕ್ಸ್

ಪ್ರತಿಯಾಗಿರುವುದರಿಂದ ಮತ್ತು ಸದರಿ ಕ್ರಯಪತ್ರಕ್ಕೆ ಸೂಕ್ತ ಮುದ್ರಾಂಕ ಶುಲ್ಕ ಪಾವತಿಯಾಗದೇ ಇರುವುದು ಮತ್ತು ಕ್ರಯಪತ್ರವು ನೊಂದಣಿಯಾಗಿರುವುದರಿಂದ ಅದನ್ನು ನಿಶಾನೆಯಾಗಿ ಗುರುತಿಸಿಲ್ಲ ಈ ಸಂಬಂಧ ವಾದ ಮಂಡಿಸಲು ಸೂಚಿಸಿ ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**
(ಕೇಶವಮೂರ್ತಿ.ಬಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಬಂಗಾರಪೇಟೆ